ಗಾಂಧಿಸ್ಮರಣೆ

# ಗಾಂಧೀಜಿಯ ಅಪೂರ್ವ ಪತ್ರಿಕಾಲೋಕ



ನಟರಾಜ್ ಹುಳಿಯಾರ್

‘ಇಂಡಿಯನ್ ಒಪೀನಿಯನ್’ ಪ್ರಾರಂಭವಾದ ತಿಂಗಳಿನೊಳಗಾಗಿಯೇ ನಾನು ವೃತ್ತಪತ್ರಿಕೆಗಳ ಒಂದೇ ಗುರಿ ಸೇವೆಯಾಗಿರಬೇಕೆಂದು ಅರಿತೆನು. ವೃತ್ತಪತ್ರಿಕೆ ಒಂದು ದೊಡ್ಡಶಕ್ತಿ. ಆದರೆ ಹತೋಟಿಯಿಲ್ಲದೆ ನೀರಿನ ಪ್ರವಾಹ ಹಳ್ಳಗಳನ್ನೆಲ್ಲ ಮುಳುಗಿಸಿ ಪೈರನ್ನು ನಾಶಮಾಡುವಂತೆ, ಹಿಡಿತವಿಲ್ಲದ ಲೇಖನಿ ಸಹ ನಾಶಕ್ಕೆ ಸಾಧನವಾಗುತ್ತದೆ. ಹತೋಟಿ ಹೊರಗಿನದಾದರೆ ಆದರಿಂದ ಹತೋಟಿಯಿಲ್ಲದಿರುವುದಕ್ಕಿಂತ ಹೆಚ್ಚು ಅಪಾಯವಾಗುತ್ತದೆ.

## 1

ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಪತ್ರಿಕೋದ್ಯಮಕ್ಕೆ ಅಡಿಯಿಟ್ಟ ಗಳಿಗೆ ಕೂಡ ಅವರ ಜೀವನದ ಹಲವು ಆಕಸ್ಮಿಕಗಳಂತೆಯೇ ಇತ್ತು. ಆದರೆ, ಪತ್ರಿಕೋದ್ಯಮದಿಂದ ಕಲಿತ ಪಾಠಗಳು ಅವರ ಭಾಷೆ, ಚಿಂತನೆ ಹಾಗೂ ವ್ಯಕ್ತಿತ್ವದ ರೂಪೀಕರಣಕ್ಕೆ ಮಹತ್ವದ ಕೊಡುಗೆ ಕೊಟ್ಟವು. ಮುಂದೆ ಗಾಂಧೀ ಪತ್ರಿಕೋದ್ಯಮ ಅಂದಿನ ಭಾರತದ ಪತ್ರಿಕೋದ್ಯಮದ ಗುರಿ, ದಾರಿಗಳನ್ನೂ ರೂಪಿಸಿತು. ಪತ್ರಿಕಾ ಬರವಣಿಗೆ ಮಾಡುತ್ತಾ ಕಲಿತ ಭಾಷೆಯ ಮೂಲಕ ಕೂಡ ಅವರು ಸ್ಪಷ್ಟವಾದ, ಎಲ್ಲರನ್ನೂ ತಲುಪಬಲ್ಲ ಭಾಷೆಯನ್ನು ರೂಢಿಸಿಕೊಂಡರು. ಗುಜರಾತಿ ಸಾಹಿತ್ಯ ಚರಿತ್ರೆಯಲ್ಲಿ ಆಧುನಿಕ ಗುಜರಾತಿ ಗದ್ಯವನ್ನು ರೂಪಿಸಿದ ಲೇಖಕರೆಂದು ಗಾಂಧೀಜಿ ಪಡೆದಿರುವ ಅನನ್ಯ ಸ್ಥಾನಕ್ಕೆ ಪತ್ರಿಕಾ ಬರವಣಿಗೆಯ ಮೂಲಕ ಅವರು ರೂಪಿಸಿಕೊಂಡ ಸರಳ, ಸಹಜ, ಸತ್ಯಶೋಧಕ ಗದ್ಯವೂ ಕಾರಣವಾಗಿತ್ತು.

1903ರ ಸುಮಾರಿಗೆ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಹಕ್ಕುಗಳಿಗಾಗಿ ಸತ್ಯಾಗ್ರಹ ಶುರು ಮಾಡಿದ್ದ ಗಾಂಧೀಜಿ, ಅಲ್ಲಿನ ಭಾರತೀಯರ ದೂರು ದುಮ್ಮಾನಗಳನ್ನು ಹೇಳಿಕೊಳ್ಳಲು ಭಾರತೀಯರದೇ ಆದ ಪ್ರಿಂಟಿಂಗ್ ಪ್ರೆಸ್ ಶುರು ಮಾಡಬೇಕೆಂದು ತೀರ್ಮಾನಿಸಿದರು. ಪ್ರಿಂಟಿಂಗ್ ಪ್ರೆಸ್ ರೆಡಿ ಮಾಡಲು ಮದನ್‌ಜಿತ್ ಎಂಬ ಉದ್ಯಮಿಗೆ ಸಾಲ